ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	:	234(218)
ಸದಸ್ಯರ ಹೆಸರು	:	ಶ್ರೀ ಎನ್. ರವಿಕುಮಾರ್ (ವಿಧಾನ ಸಭೆಯಿಂದ ಚುನಾಯಿತರಾದವರು)
ಉತ್ತರಿಸಬೇಕಾದ ದಿನಾಂಕ	:	17.02.2022
ಉತ್ತರಿಸುವ ಸಚಿವರು	:	ಗೃಹ ಸಚಿವರು

ಕ್ರಸಂ	ಪ್ರಶ್ನೆ	ಉತ್ತರ
(ಅ)	ಸಿಲ್ಕ್‌ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿಯನ್ನು ಸಂಪರ್ಕಿಸುವ ಮೇಲು ರಸ್ತೆಯ ಪಿಲ್ಲರ್ ಸಂಖ್ಯೆ: 20 ಮತ್ತು 21ರ ನಡುವಿನ ರಾಷ್ಟ್ರೀಯ ಹೆದ್ದಾರಿಯ 7ರ ನಡುವಿನ ರಸ್ತೆ ವಿಭಾಜಕಗಳನ್ನು ತೆರವುಗೊಳಿಸುವ ಪೊಲೀಸರಿಗೆ ಯಾವ ನಿಯಮದನ್ವಯ ಅಧಿಕಾರವನ್ನು ನೀಡಲಾಗಿದೆ ;	ಸಿಲ್ಕ್‌ಬೋರ್ಡ್‌ನಿಂದ ಎಲೆಕ್ಟ್ರಾನಿಕ್ ಸಿಟಿ ಸಂಪರ್ಕಿಸುವ ಮೇಲು ರಸ್ತೆಯ ಪಿಲ್ಲರ್ ಸಂಖ್ಯೆ: 20 & 21ರ ನಡುವಿನ ರಾಷ್ಟ್ರೀಯ ಹೆದ್ದಾರಿಯ 7ರ ನಡುವಿನ ರಸ್ತೆ ವಿಭಜಕಗಳನ್ನು ತೆರವುಗೊಳಿಸುವ ಅಧಿಕಾರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿದ್ದು, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರೇ ರಸ್ತೆ ವಿಭಜಕಗಳನ್ನು ತೆರವುಗೊಳಿಸಿರುತ್ತಾರೆ.
(ಆ)	ರಾಜ್ಯ ಸರ್ಕಾರದ ಯಾವುದೇ ರಸ್ತೆ ಅಥವಾ ರಾಷ್ಟ್ರೀಯ ಹೆದ್ದಾರಿಯ ಯಾವುದೇ ರಸ್ತೆಯ ರಸ್ತೆ ವಿಭಾಜಕಗಳನ್ನು ಪೊಲೀಸ್ ಯಾವ ನಿಯಮದನ್ವಯ ತೆರವುಗೊಳಿಸಬಹುದು (ಮಾಹಿತಿ ನೀಡುವುದು) ;	ರಾಷ್ಟ್ರೀಯ ಹೆದ್ದಾರಿಯ ರಸ್ತೆ ವಿಭಜಕಗಳನ್ನು ತೆರವುಗೊಳಿಸುವ ಅಧಿಕಾರ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವ್ಯಾಪ್ತಿಗೆ ಒಳಪಟ್ಟಿರುತ್ತದೆ. ಕಮೀಷನರೇಟ್ ವ್ಯಾಪ್ತಿಯ ರಸ್ತೆಗಳಲ್ಲಿ ಸಾರ್ವಜನಿಕ ಸುಗಮ ಸಂಚಾರದ ಹಿತದೃಷ್ಟಿಯಿಂದ ವಿಭಜಕಗಳನ್ನು ತೆರವುಗೊಳಿಸುವುದು ಅನಿವಾರ್ಯವೆಂದು ಕಂಡು ಬಂದಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ಅನುವು ಮಾಡಿಕೊಡುವುದು ಪೊಲೀಸ್ ಆಯುಕ್ತರವರಿಗೆ ಅಧಿಕಾರ ಪ್ರದತ್ತವಾಗಿರುತ್ತದೆ.
(ಇ)	ಪೊಲೀಸ್ ಇಲಾಖೆಗೆ ನಿರ್ದೇಶಕರು, ಬಿ.ಈ.ಟಿ.ಪಿ.ಎಲ್ ಎಲೆಕ್ಟ್ರಾನಿಕ್ ಸಿಟಿ ಇವರು ಅನುಮತಿ ನೀಡಿಲ್ಲವೆಂದಾದಲ್ಲಿ ಅಕ್ರಮವಾಗಿ ರಸ್ತೆ ವಿಭಾಜಕಗಳನ್ನು ತೆರವುಗೊಳಿಸಿ ಪೊಲೀಸ್ ಅಧಿಕಾರಿಗಳ ಮೇಲೆ ರಾಷ್ಟ್ರೀಯ ಸಂಪತ್ತಿಗೆ ಹಾನಿಗೊಳಿಸಿದ ಕುರಿತು ತೆಗೆದುಕೊಂಡ ಕ್ರಮಗಳೇನು ?	ರಾಷ್ಟ್ರೀಯ ಹೆದ್ದಾರಿಯ 7ರ ನಡುವಿನ ರಸ್ತೆ ವಿಭಜಕಗಳನ್ನು ಪೊಲೀಸ್ ಇಲಾಖೆಯಿಂದ ತೆರವುಗೊಳಿಸಿರುವುದಿಲ್ಲ. ದಿನಾಂಕ:03.04.2019 ರಂದು ರಸ್ತೆ ಸುರಕ್ಷತಾ ಸಮಿತಿಯ ಸಭೆಯಲ್ಲಿ ಕೈಗೊಂಡ ನಿರ್ಣಯದಂತೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದಿಂದ ತೆರವುಗೊಳಿಸಲಾಗಿರುತ್ತದೆ. ರಸ್ತೆ ವಿಭಜಕಗಳನ್ನು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ತೆರವುಗೊಳಿಸಿರುವುದರಿಂದ ಪೊಲೀಸ್ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳುವ ಪ್ರಶ್ನೆ ಉದ್ಭವವಾಗುವುದಿಲ್ಲ.

ಹೆಚ್‌ಡಿ 42 ಎಸ್‌ಎಸ್‌ಟಿ 2022

(ಆರಗ ಜ್ಞಾನೇಂದ್ರ)
ಗೃಹ ಸಚಿವರು